

13ನೇ ಶತಮಾನದಲ್ಲಿ ನಿರ್ಮಾಣವಾದ ಸೇಂಟ್ ಮೇರಿ ಚರ್ಚ್

ಬಾರಿಗೆ ಇಲ್ಲಿ ಬೆಳ್ಳಿ ನಾಣ್ಯಗಳನ್ನು ಮುದ್ರಿಸಲಾಯಿತು. ಸಿಗ್ಟುನಾದ ಅಭಿವೃದ್ಧಿಗೆ ರಾಜಮನೆತನದಷ್ಟೇ ಬಿಷಪ್ ಕೇಂದ್ರವೂ ರಾಜಕೀಯ ಕೇಂದ್ರವಾಗಿ ಪ್ರಾಮುಖ್ಯ ಹೊಂದಿದ್ದನ್ನು ಇಲ್ಲಿ ಕಾಣಬಹುದು. ಈ ಚರ್ಚ್‌ಗಳಲ್ಲಿ ಸೇಂಟ್ ಪರ್, ಸೆಂಟ್ ಲಾಸ್ ಮತ್ತು 11ನೇ ಶತಮಾನದಲ್ಲಿ ಸಿಗ್ಟುನಾ ಮೂಲಕ ಹಲವಾರು ಬಾರಿ ಪ್ರಯಾಣಿಸಿದ ನಾರ್ವೇಜಿಯನ್ ಸಂತ ರಾಜ ಓಲೋಫ್ ಚರ್ಚ್‌ಗಳ ಅವಶೇಷಗಳನ್ನು ನೋಡಬಹುದು. ಆ ಅವಶೇಷಗಳನ್ನು ಜತನವಾಗಿ ಕಾಯ್ದಿರಿಸಿದ್ದಾರೆ. ಇಲ್ಲಿ 13ನೇ ಶತಮಾನದಲ್ಲಿ ನಿರ್ಮಾಣವಾದ ಸೇಂಟ್ ಮೇರಿ ಚರ್ಚ್ ಕೂಡ ಇದೆ. ಇಂದಿಗೂ ಇಲ್ಲಿ ಪ್ರಾರ್ಥನೆಗಳು ನಡೆಯುತ್ತವೆ.

ಈ ಚರ್ಚನ್ನು ಸಂಪೂರ್ಣ ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ರೋಮನ್, ಗೋಥಿಕ್ ಶೈಲಿಯ ಕಮಾನು ನಿರ್ಮಾಣವನ್ನು ಇಲ್ಲಿ ನೋಡಬಹುದು.

## ಕಂಚಿನ ಯುಗದ ನಂಟು

ಸಿಗ್ಟುನಾದ ಕೆಲವು ಸಮಾಧಿಗಳು ಕಂಚಿನ ಯುಗದಿಂದಲೂ ಕಂಡುಬಂದಿವೆ. ಇಲ್ಲಿ 35ಕ್ಕಿಂತ ಹೆಚ್ಚಿನ ರೂನ್‌ಸ್ಟೋನ್‌ಗಳು ಸಿಕ್ಕಿವೆ. ಅವುಗಳನ್ನು ಸಂರಕ್ಷಿಸಿ ಇಡುವುದರ ಜೊತೆಗೆ ಆ ಕಾಲದ ಅಕ್ಷರಗಳ ಸ್ವರೂಪ, ಈ ಕಾಲದಲ್ಲಿ ಹೇಗಿದೆ ಎಂಬುದನ್ನು ಪಕ್ಕದಲ್ಲಿನ ಮಾರ್ಗದರ್ಶಿ ಫಲಕದಲ್ಲಿ ಗುರುತಿಸಿದ್ದಾರೆ. ನಮ್ಮಲ್ಲಿನ ಕಲ್ಲಿನ ಶಾಸನಗಳಂತೆ ಕಾಣುವ ಈ ರೂನ್‌ಸ್ಟೋನ್‌ಗಳು ಆ ಕಾಲದ ಭಾಷೆಯನ್ನು ಅರಿಯಲು ಸಹಕಾರಿಯಾಗಿವೆ.

'ಸಿಗ್' ಎನ್ನುವ ಹೆಸರಿನಿಂದ ಸಿಗ್ಟುನಾ ಎನ್ನುವ ಹೆಸರು ರೂಪುಗೊಂಡಿದೆ. ಸಿಗ್ ಎಂದರೆ 'ನೀರು ಒಸರುವ ಜಾಗ' ಎಂದರ್ಥ. ಮತ್ತೊಂದು ಸಿದ್ಧಾಂತದ ಪ್ರಕಾರ 'ಬಲವಾದ ಕೋಟೆ' ಎಂಬ ಅರ್ಥವೂ ಇದೆ. ಇಲ್ಲಿ ಅವೆರಡನ್ನೂ ಕಾಣಬಹುದು. ಈ ಪುಟ್ಟ ನಗರ ಮಲಾರೆನ್ ಸರೋವರದ ತೀರದಲ್ಲಿಯೇ ಇದೆ. ಜೊತೆಗೆ ಕೋಟೆಯ ಅವಶೇಷವೂ ಇದೆ. ಬಾಲ್ಟಿಕ್ ಸಮುದ್ರದ ಮೂಲಕ ಸರೋವರವನ್ನು ಹಾಯ್ದು ಈ ನಗರವನ್ನು 11ನೇ ಶತಮಾನದಲ್ಲಿ ಆಕ್ರಮಣಕಾರರು ಲೂಟಿ ಮಾಡಿದ್ದರು. ದಾಳಿಗೆ ತುತ್ತಾದರೂ ಮತ್ತೆ ತನ್ನ ಅಸ್ತಿತ್ವವನ್ನು ಇದು ಉಳಿಸಿಕೊಂಡಿತು.

## ಮಲಾರೆನ್‌ನಲ್ಲಿ ಸ್ಕೇಯಿಂಗ್

13ನೇ ಶತಮಾನದವರೆಗೂ ಈ ನಗರ ಪ್ರಾಮುಖ್ಯ ಹೊಂದಿತ್ತು. ನಂತರ ಸ್ಟಾಕ್‌ಹೋಮ್‌ಗೆ ಜನ ಆಕರ್ಷಿತರಾದರು. ಇಲ್ಲಿರುವ ಮಲಾರೆನ್ ನದಿ ಚಳಿಗಾಲದಲ್ಲಿ ಹೆಪ್ಪುಗಟ್ಟುವುದರಿಂದ ಇಲ್ಲಿ ಸ್ಕೇಯಿಂಗ್ ಆಡಲು ಜನ ಬರುತ್ತಾರಂತೆ. ಜೊತೆಗೆ ಸ್ಕೇಯಿಂಗ್ ಅನ್ನು ಆ ಸಮಯದಲ್ಲಿ ಸಂಚಾರಕ್ಕೂ ಬಳಸುತ್ತಾರೆ.

1744ರಲ್ಲಿ ಮೇಯರ್ ಎರಿಕ್ ಕಿಜ್ಲಿನ್ ವಿನ್ಯಾಸಗೊಳಿಸಿದ ಯೂರೋಪಿನ ಅತ್ಯಂತ ಚಿಕ್ಕದಾಗಿರುವ 'ಸಿಗ್ಟುನಾ ಟೌನ್‌ಹಾಲ್' ಇಲ್ಲಿದೆ. ಆಗ ಅಲ್ಲಿದ್ದ ನಿವಾಸಿಗಳ ಸಂಖ್ಯೆ 380. ಈಗ ಸುಮಾರು ಹತ್ತು ಸಾವಿರ ಜನಸಂಖ್ಯೆಯನ್ನು ಈ ನಗರ ಹೊಂದಿದೆ. ಈ ನೆಲದ ಅನೇಕ ಪ್ರಸಿದ್ಧರು ಜಗತ್ತಿನಾದ್ಯಂತ ಪ್ರಖ್ಯಾತಿ ಪಡೆದಿದ್ದಾರೆ. ಅವರಲ್ಲಿ ಲೇಖಕಿ ಮ್ಯಾಗ್ಡಲೀನಾ, ಇತಿಹಾಸಕಾರ ಓಲೋಫ್ ಪಾಮೆ, ನಟ ಇಂಗಾ ಲ್ಯಾಂಡ್ರೆ, ಫ್ರೆಡ್ರಿಕ್ ಹಿಲ್ಲರ್ ಮುಂತಾದವರನ್ನು ಹೆಸರಿಸಬಹುದು.

ಹಳೆಯದನ್ನು ಜತನದಿಂದ ಕಾಪಾಡಿ ಆ ಮೂಲಕ ಪ್ರವಾಸಿಗರನ್ನು ಆಕರ್ಷಿಸುವ ಕಲೆಯನ್ನು ನಾವು ವಿದೇಶಿಯರಿಂದ ಕಲಿಯಬೇಕು. ನಮ್ಮ ಸಂಸ್ಕೃತಿ, ಕಲೆ, ಶಾಸನ, ಕೋಟೆ, ದೇವಾಲಯ, ಮುಂತಾದ ಐತಿಹಾಸಿಕ ಮೌಲ್ಯಗಳನ್ನು ಇನ್ನಷ್ಟು ಚೆನ್ನಾಗಿ ಕಾಪಾಡಬೇಕೆಂದು ಇವೆಲ್ಲವನ್ನೂ ನೋಡಿದಾಗ ನನಗೆ ಅನ್ನಿಸಿತು. ಮನರಂಜನೆಯೊಂದಿಗೆ ಇತಿಹಾಸವನ್ನು ಅರಿಯಲು, ಸ್ಟಾಕ್‌ಹೋಮ್‌ಗೆ ಹೋದವರು ತಪ್ಪದೆ ಈ ಪುಟ್ಟ ನಗರವನ್ನು ವೀಕ್ಷಿಸಿ ಬನ್ನಿ.

ಪ್ರತಿಕ್ರಿಯಿಸಿ: feedback@sudha.co.in



...ಗ್ಟುನಾ'ದ

